| Roll No. | | | | | | | | | | | Serial No. of Q. C. A. B. |
|---|---|---|---|---|---|---|---|---|---|---|---|

ಒಟ್ಟು ಪ್ರಶ್ನೆಗಳ ಸಂಖ್ಯೆ : 54 ] [ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 24

Total No. of Questions : 54 ] [ Total No. of Printed Pages : 24

**ಸಂಕೇತ ಸಂಖ್ಯೆ : 33-K** **ವಿಷಯ : ದ್ವಿತೀಯ ಭಾಷೆ — ಕನ್ನಡ**

**Code No. : 33-K** **Subject : Second Language — KANNADA**

ದಿನಾಂಕ : 05. 04. 2013 ] [ Date : 05. 04. 2013

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-15 ರವರೆಗೆ ] [ Time : 9-30 A.M. to 12-15 P.M

ಪರಮಾವಧಿ ಅಂಕಗಳು : 100 ] [ Max. Marks : 100

**FOR OFFICE USE ONLY**

| Q. No. | Marks | Q. No. | Marks | Q. No. | Marks | Q. No. | Marks | Q. No. | Marks |
|---|---|---|---|---|---|---|---|---|---|
| 1. | | 12. | | 23. | | 34. | | 45. | |
| 2. | | 13. | | 24. | | 35. | | 46. | |
| 3. | | 14. | | 25. | | 36. | | 47. | |
| 4. | | 15. | | 26. | | 37. | | 48. | |
| 5. | | 16. | | 27. | | 38. | | 49. | |
| 6. | | 17. | | 28. | | 39. | | 50. | |
| 7. | | 18. | | 29. | | 40. | | 51. | |
| 8. | | 19. | | 30. | | 41. | | 52. | |
| 9. | | 20. | | 31. | | 42. | | 53. | |
| 10. | | 21. | | 32. | | 43. | | 54. | |
| 11. | | 22. | | 33. | | 44. | | × | |
| | | | | | | | | ***Total Marks*** | |

| Total Marks in words | | Grand Total | |
|---|---|---|---|

| | | | |
|---|---|---|---|
| 1. ✓ | | | |
| 2. ✓ | | ✓ | ✓ |
| *Signature of Evaluators* | *Registration No.* | *Signature of the Deputy Chief* | *Signature of the Room Invigilator* |

*ಸಾಮಾನ್ಯ ಸೂಚನೆಗಳು :*

i) ಈ ಪ್ರಶ್ನೋತ್ತರ ಕಿರು ಪುಸ್ತಕವು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 54 ಪ್ರಶ್ನೆಗಳನ್ನು ಹೊಂದಿದೆ.

ii) ಪ್ರತಿಯೊಂದು ವಸ್ತುನಿಷ್ಠ ಮಾದರಿ ಪ್ರಶ್ನೆಗೆ ಉತ್ತರಕ್ಕಾಗಿ ಜಾಗವನ್ನು ಕೊಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಕೊಟ್ಟಿರುವ ಜಾಗದಲ್ಲಿ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ.

iii) ವಿಷಯನಿಷ್ಠ ಮಾದರಿ ಪ್ರಶ್ನೆಯ ಉತ್ತರಗಳಿಗೆ ಸಾಕಷ್ಟು ಜಾಗವನ್ನು ಕೊಡಲಾಗಿದೆ. ಉತ್ತರಗಳನ್ನು ಆಯಾ ಜಾಗಗಳಲ್ಲಿಯೇ ಬರೆಯಿರಿ.

iv) ವಸ್ತುನಿಷ್ಠ ಮಾದರಿ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಅನುಸರಿಸಿ.

v) ವಿದ್ಯಾರ್ಥಿಗಳು ಪೆನ್ಸಿಲ್‌ನಿಂದ (ಸೀಸದ ಕಡ್ಡಿ) ಉತ್ತರಗಳನ್ನು ಬರೆಯಬಾರದು. ಪೆನ್ಸಿಲ್‌ನಿಂದ ಉತ್ತರ ಬರೆದಲ್ಲಿ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ. (ನಕ್ಷೆಗಳು, ರೇಖಾಚಿತ್ರಗಳು ಮತ್ತು ಭೂಪಟಗಳನ್ನು ಬಿಟ್ಟು).

vi) ಬಹು-ಆಯ್ಕೆ, ಖಾಲಿ ಸ್ಥಳಗಳನ್ನು ಭರ್ತಿ ಮಾಡುವುದು, ಹೊಂದಿಸಿ ಬರೆಯುವ ಪ್ರಶ್ನೆಗಳ ವಿಷಯದಲ್ಲಿ ಕೆರೆದು ಅಳಿಸುವುದು / ತಿದ್ದಿ ಬರೆಯುವುದು / ಗುರುತಿಸುವುದು ಮಾಡಿದಲ್ಲಿ ಮೌಲ್ಯಮಾಪನಕ್ಕೆ ಅನರ್ಹವಾಗುತ್ತದೆ.

vii) ಪ್ರಶ್ನೆ ಪತ್ರಿಕೆಯನ್ನು ಓದಿ, ಅರ್ಥೈಸಿಕೊಳ್ಳಲು 15 ನಿಮಿಷಗಳ ಹೆಚ್ಚಿನ ಕಾಲಾವಕಾಶ ನೀಡಲಾಗಿದೆ.

ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ಸೂಚಿಸಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಉತ್ತರಕ್ಕೆ ಕೊಟ್ಟಿರುವ ಜಾಗದಲ್ಲಿಯೇ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ :

$15 \times 1 = 15$

1. 'ಸಿಂಹ' — ಈ ಪದದ ತದ್ಭವ ರೂಪ

(ಎ) ಸಿಂಗ (ಬಿ) ಸಿಂಹಿಣಿ

(ಸಿ) ಸಿಂಹರ (ಡಿ) ಸಿಂಹಳ

*ಉತ್ತರ :* ______________________

2. ಈ ಕೆಳಗಿನ ಪದಗಳಲ್ಲಿ ಶುದ್ಧರೂಪ ಯಾವುದು ?

(ಎ) ಅಹ್ರತೆ (ಬಿ) ಅರ್ಹತೆ

(ಸಿ) ಅಹರ್ತೆ (ಡಿ) ಅರಹತೆ

*ಉತ್ತರ :* ______________________

3. ಇದು ಉತ್ತಮ ಪುರುಷ ಸರ್ವನಾಮಪದವಾಗಿದೆ

(ಎ) ನಾನು (ಬಿ) ಅದು

(ಸಿ) ನೀನು (ಡಿ) ಅವನು

*ಉತ್ತರ :* ______________________

4. ಕೇಳಿಕೇಳಿ — ಈ ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ?

(ಎ) ಅನುಕರಣಾವ್ಯಯ (ಬಿ) ಜೋಡಿನುಡಿ

(ಸಿ) ದ್ವಿರುಕ್ತಿ (ಡಿ) ಸಂಧಿ

*ಉತ್ತರ :* ______________________

5. ಇನ್ನೆಲ್ಲಿ — ಈ ಪದದಲ್ಲಿ ನಡೆದಿರುವ ಸಂಧಿಕಾರ್ಯ ಯಾವುದು ?

(ಎ) ಆದೇಶ ಸಂಧಿ (ಬಿ) ಆಗಮ ಸಂಧಿ

(ಸಿ) ಗುಣ ಸಂಧಿ (ಡಿ) ಲೋಪ ಸಂಧಿ

*ಉತ್ತರ :* ______________________

6. ಹಿಮಾಲಯಕ್ಕೆ — ಈ ಪದದಲ್ಲಿರುವ ವಿಭಕ್ತಿ

(ಎ) ಪ್ರಥಮಾ (ಬಿ) ತೃತೀಯಾ

(ಸಿ) ಚತುರ್ಥೀ (ಡಿ) ಸಪ್ತಮೀ

*ಉತ್ತರ :* ______________________

7. 'ದುರ್ದೈವ' — ಪದದ ವಿರುದ್ಧಾರ್ಥಕ ರೂಪ

(ಎ) ಪರದೈವ (ಬಿ) ಸುದೈವ

(ಸಿ) ದೈವ (ಡಿ) ದುರದೈವ

*ಉತ್ತರ :* ______________________

8. 'ಥಳಥಳ' — ಈ ಪದವು ಯಾವ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ ?

(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ

(ಸಿ) ಪಡೆನುಡಿ (ಡಿ) ಸರ್ವನಾಮ

*ಉತ್ತರ :* ______________________

9. 'ನಿರ್ದೇಶಕಿ' — ಈ ಪದದ ಪುಲ್ಲಿಂಗ ರೂಪವಿದು

(ಎ) ನಿರ್ದೇಶನ (ಬಿ) ನಾಯಕ

(ಸಿ) ಮಾರ್ಗದರ್ಶಕ (ಡಿ) ನಿರ್ದೇಶಕ

*ಉತ್ತರ :* ______________________

10. ರಾಮಚಂದ್ರರಾಯರು 'ಸ್ವದೇಶಿ ಚಳುವಳಿ' ಯನ್ನು ಆರಂಭಿಸಿದರು. ಅಡಿಗೆರೆ ಎಳೆದ ಪದದಲ್ಲಿರುವ ಲೇಖನ ಚಿಹ್ನೆ ಯಾವುದು ?

(ಎ) ಆವರಣ (ಬಿ) ಅನಾವರಣ

(ಸಿ) ವಿವರಣ (ಡಿ) ಉದ್ಧರಣ

*ಉತ್ತರ :* ______________________

11. 'ಕಾಡು' — ಈ ಪದದ ಸಮಾನಾರ್ಥಕ ರೂಪ

(ಎ) ಅರಣ್ಯ (ಬಿ) ಹಿರಣ್ಯ

(ಸಿ) ನಾಡು (ಡಿ) ತೋಡು

*ಉತ್ತರ :* ______________________

12. 'ಆಡಿದನು — ಈ ಪದದ ಭವಿಷ್ಯತ್ಕಾಲ ರೂಪ

(ಎ) ಆಡು (ಬಿ) ಆಡುತ್ತಿರುವನು

(ಸಿ) ಆಡುವನು (ಡಿ) ಆಡನು

*ಉತ್ತರ :* ______________________

13. 'ಅವ್ವೆ' — ಈ ಪದದ ಗ್ರಾಂಥಿಕ ರೂಪ

(ಎ) ಅವ್ವೆ (ಬಿ) ಅವಳ

(ಸಿ) ಅಮ್ಮ (ಡಿ) ಅವಳು

*ಉತ್ತರ :* ______________________

14. ಈ ಪದಗಳಲ್ಲಿ ಅನ್ಯದೇಶೀಯಪದ ಯಾವುದು ?

(ಎ) ಕಾರ್ಡು (ಬಿ) ಕವಿ

(ಸಿ) ನಾಡು (ಡಿ) ಮಗ

*ಉತ್ತರ :* ______________________

15. 'ಕೋಗಿಲೆ' — ಈ ಪದದ ಬಹುವಚನ ರೂಪವಿದು

(ಎ) ಕೋಗಿಲೆಯರು (ಬಿ) ಕೋಗಿಲೆಗಳು

(ಸಿ) ಕೋಗಿಲೆರು (ಡಿ) ಕೋಗಿಲೆಯಂದಿರು

*ಉತ್ತರ :* ______________________

16. ಈ ಕೆಳಗಿನ **'ಮ'** ಪಟ್ಟಿಯಲ್ಲಿರುವ ವ್ಯಾಕರಣಾಂಶಗಳಿಗೆ ಸರಿಹೊಂದುವ ಉದಾಹರಣೆಗಳನ್ನು **'ಚ'** ಪಟ್ಟಿಯಿಂದ ಕ್ರಮಾಕ್ಷರದೊಂದಿಗೆ ಆರಿಸಿ, ಉತ್ತರಕ್ಕೆ ಮೀಸಲಿಟ್ಟ ಜಾಗದಲ್ಲಿ ಬರೆಯಿರಿ : 5 × 1 = 5

| ***ಮ*** | | ***ಚ*** | |
|---|---|---|---|
| i) | ರೂಪಕಾಲಂಕಾರ | ಅ) | ಆರು ಸಾಲುಗಳು |
| ii) | ನುಡಿಗಟ್ಟು | ಆ) | ತಿನ್ನು |
| iii) | ಷಟ್ಪದಿ | ಇ) | ಕರಗದ |
| iv) | ಧಾತು | ಈ) | ವಿಮಲಧರ್ಮದ ವಾಣಿ |
| v) | ನಿಷೇಧಾರ್ಥಕ | ಉ) | ಕಬ್ಬಿಣದ ಕಡಲೆ |
| | | ಊ) | ಹಣ್ಣುಹಂಪಲು |
| | | ಋ) | ನೋಡಿದನು |
| | | ಎ) | ನಾಲ್ಕು ಸಾಲುಗಳು |

*ಉತ್ತರಗಳು :* i) ______________________

ii) ______________________

iii) ______________________

iv) ______________________

v) ______________________

ಈ ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗಗಳನ್ನು ಸೂಕ್ತ ಪದಗಳಿಂದ ತುಂಬಿ ಬರೆಯಿರಿ : $5 \times 1 = 5$

17. ದೇವತೆಯು ಭರತಕುಮಾರನಿಗೆ ........................................................................ ಕೊಟ್ಟಿತು.

18. ತಿರುಮಕೂಡಲು ನರಸೀಪುರದ ತೋಪಿನಲ್ಲಿ ........................................... ಯರ ಸಮ್ಮೇಳನ ನಡೆಯಿತು.

19. ಮಡಿಯ ನುಸುಳಾಟದಲ್ಲಿ ಶಾಸ್ತ್ರಿಗಳ ಸೊಸೆಯು ................................................ ಗಿಂತ ಹೆಚ್ಚಿನ ಚಪಲತೆ ತೋರುತ್ತಿದ್ದಳು.

20. ಬಡವರ ಜೀವನ ........................................................................................ ಸ್ವತ್ತು.

21. ಹಡಗು ................................................................................ ವೇಗದಲ್ಲಿ ಚಲಿಸುತ್ತದೆ.

ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಗಳನ್ನು ಬರೆಯಿರಿ : $8 \times 1 = 8$

22. ಕೃಷ್ಣದೇವರಾಯನೊಡನೆ ಪಗಡೆಯಾಟ ಆಡುತ್ತಿದ್ದವರು ಯಾರು ?

23. ಹಿಂದಿ ಉಪಭಾಷೆ ಬುಂದೇಲಿಯಲ್ಲಿ ಪ್ರಯೋಗವಾದ ನಾಟಕ ಯಾವುದು ?

24. ತಗಡೂರು ರಾಮಚಂದ್ರರಾಯರ ಉಡುಪು ಯಾವುದನ್ನು ಪ್ರತಿನಿಧಿಸುತ್ತಿದ್ದಿತು ?

25. ಕಾಡುಮಿಕಗಳು ಹಳ್ಳದ ಬಳಿ ಏಕೆ ಬಂದವು ?

26. ಗಂಡ ಹೆಂಡತಿ ಮಕ್ಕಳು ಎಲ್ಲಿಗೆ ಹೋದರೆಂದು ಮೊಗಸಾಲೆಯವರು ಹೇಳಿದ್ದಾರೆ ?

27. ಹಡಗವು ಎಷ್ಟು ಭಾಷೆಗಳ ನವಖಂಡ ?

28. ಏಕೋಭಾವದಿಂದ ಯಾರನ್ನು ಭಜಿಸಬೇಕೆಂದು ಪುರಂದರದಾಸರು ತಿಳಿಸಿದ್ದಾರೆ ?

29. ಭರತ ಭೂತಳಕ್ಕೆ ಸಿಂಗಾರವಾದ ನಗರ ಯಾವುದು ?

ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $12 \times 2 = 24$

30. ಭರತಕುಮಾರನಿಗೆ ಸೂರ್ಯದೇವ ಮಾಡಿದ ಸಹಾಯವೇನು ?

31. ಪೂರ್ಣಿಮಾಳ ಗಂಡನ ಬೆನ್ನು ನೀಲಿಗಟ್ಟಿದ್ದು ಏಕೆ ?

32. ತಗಡೂರು ರಾಮಚಂದ್ರರಾಯರ ಸಾಂಸಾರಿಕ ಬದುಕನ್ನು ಕುರಿತು ಬರೆಯಿರಿ.

33. 'ಮಳೆಕೊಯ್ಲಿನ ಉಪಯೋಗವನ್ನು ಯಾರ್‍ಯಾರು ಹೇಗೆ ಪಡೆದಿದ್ದಾರೆ' ? ಎಂದು ಶೇಖರ ಹೇಳಿದನು.

34. ಮಳೆನೀರು ಭೂಮಿಯೊಳಕ್ಕೆ ಇಳಿಯುವುದು ಕಡಿಮೆಯಾಗುತ್ತಿದೆ ಏಕೆ ?

35. ಶಾಸ್ತ್ರಿಗಳ ಮುಖದಲ್ಲಿ ಹೊಗೆ ಮುಸುಕಲು ಕಾರಣವೇನು ?

36. ಹೆಚ್.ಎಸ್. ವೆಂಕಟೇಶಮೂರ್ತಿಯವರು ಆಧುನಿಕ ಕವಿಗಳನ್ನು ಪ್ರಕೃತಿಯೊಂದಿಗೆ ಹೇಗೆ ಸಮ್ಮಿಲನಗೊಳಿಸಿದ್ದಾರೆ ?

37. ಹೊರೆಯಾಲ ದೊರೆಸ್ವಾಮಿಯವರು ಎಂಥ ಯುಗಾದಿ ಬರಲೆಂದು ಆಶಿಸಿದ್ದಾರೆ ?

38. ಹಡಗು ಯಾವ ಯಾವ ದೇಶಗಳಲ್ಲಿ ಸಂಚರಿಸುತ್ತದೆ ಎಂದು ಗೋಕಾಕರು ಹೇಳಿದ್ದಾರೆ ?

39. 'ದರ್ಶನ' ಪದ್ಯದಲ್ಲಿ ಕವಿಯನ್ನು ನೋಡಿದ ಹಿರಿಯರಲ್ಲಾದ ಬದಲಾವಣೆಗಳಾವುವು ?

40. ಗಾಂಧೀಜಿಯವರನ್ನು 'ಹಿರಿಯರ ತಂದೆ' ಎಂದು ಏಕೆ ಕರೆಯಲಾಗಿದೆ ?

41. ಕಲಿಗಳ ದೇವ ಭರತನು ಶೋಭಿಸಿದ ಪರಿಯನ್ನು ರತ್ನಾಕರವರ್ಣಿ ಹೇಗೆ ವರ್ಣಿಸಿದ್ದಾರೆ ?

ಈ ಕೆಳಗೆ ಕೊಟ್ಟಿರುವ ಸಾಹಿತಿಗಳ ಸ್ಥಳ ಮತ್ತು ಕಾಲವನ್ನು ವಾಕ್ಯಗಳಲ್ಲಿ ಬರೆಯಿರಿ : $2 \times 1 = 2$

42. ಯಮುನಾಮೂರ್ತಿ

43. ತೀ.ನಂ ಶ್ರೀಕಂಠಯ್ಯ

44. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ : $1 \times 4 = 4$

ಪಂಪ ಮಹಾಚಲ ಜೋಡಿ ಶಿಖರಗಳು

ಧುಮ್ಮಿಕ್ಕುವ ಹರಿಹರನ ಝರಿ

ಅಥವಾ

ಕಣ್ಣು ಕೈಕಾಲ್ ಕಿವಿ ನಾಲಿಗೆ ಇರಲಿಕ್ಕೆ

ಉಣ್ಣದೆ ಉಪವಾಸ ಇರುವರೆ ಖೋಡಿ ||

ಈ ಕೆಳಗಿನ ಹೇಳಿಕೆಗಳನ್ನು ಸಂದರ್ಭ ಸಹಿತ ವಿವರಿಸಿ : $4 \times 3 = 12$

45. ''ಹೂಂ ನಿಮ್ಮ ಕೈ ಹಿಡಿದ ಮೇಲೆ ಇನ್ನು ಏನೇನು ಮಾಡಬೇಕೊ ?''

46. ''ತಾನು ಏನು ಅಲ್ವೋ ಅದನ್ನು ಮಾಡೋದೇ ಅಭಿನಯ.''

47. ''ನಿನ್ನ ತವರೂರ ನಾನೇನು ಬಲ್ಲೆನು.''

48. ''ದಾಳಿ ಬಾರದ ಮುನ್ನ ಧರ್ಮವ ಗಳಿಸಿರೊ.''

49. ಈ ಕೆಳಗಿನವುಗಳಲ್ಲಿ ಯಾವುದಾದರೂ **ಒಂದು** ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ : $1 \times 3 = 3$

— ಹಿತ್ತಲಗಿಡ ಮದ್ದಲ್ಲ

— ತುಂಬಿದ ಕೊಡ ತುಳುಕುವುದಿಲ್ಲ

— ಬೆಳೆಯುವ ಪೈರು ಮೊಳಕೆಯಲ್ಲಿ

ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $2 \times 4 = 8$

— ರಾಮಬಾಡ ಪ್ರದೇಶದ ಕಿರುದಾರಿಯನ್ನು 'ಮಿನಿವಿಶ್ವ' ವೆಂದು ಕರೆದುದು ಏಕೆ ?

— ಎಂ.ಹೆಚ್. ಮರಿಗೌಡರ ಸಾಧನೆಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.

— ಬಿ.ವಿ. ಕಾರಂತರು ನಿರ್ದೇಶಿಸಿದ ನಾಟಕ ಮತ್ತು ಚಲನಚಿತ್ರಗಳನ್ನು ಕುರಿತು ಬರೆಯಿರಿ.

50.

51.

52. ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು ಐದಾರು ವಾಕ್ಯಗಳಲ್ಲಿ ಉತ್ತರ ಬರೆಯಿರಿ : $1 \times 4 = 4$

— ಶಾಂತಾದೇವಿಯವರು ದೇಹವನ್ನು 'ಅಚ್ಚು ಮುರಿದ ಹಾಳುಬಂಡಿ' ಎಂದು ಕರೆಯಲು ಕಾರಣವೇನು ? ವಿವರಿಸಿ.

— 'ಗಾಂಧೀಜಿಯವರು ಸರ್ವೋದಯದ ಸೂತ್ರಧಾರ' — ಈ ಮಾತಿನ ಹಿನ್ನೆಲೆ ವಿವರಿಸಿ.

53. ಗದಗ ಜಿಲ್ಲೆಯ ರೋಣ ತಾಲೂಕಿನ ಸರ್ವೋದಯ ಪ್ರೌಢಶಾಲೆಯಲ್ಲಿ ಓದುತ್ತಿರುವ ಸುಹಾಸ್ / ಸುಶೀಲ ಎಂದು ಭಾವಿಸಿ, ಅನಾರೋಗ್ಯದ ಕಾರಣ ನೀಡಿ ಎರಡು ದಿನಗಳ ರಜಾ ನೀಡುವಂತೆ ಕೋರಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. $1 \times 5 = 5$

ಅಥವಾ

ಗುಲಬರ್ಗದ ಶರಣಬಸವೇಶ್ವರ ಪ್ರೌಢಶಾಲೆಯಲ್ಲಿ ಓದುತ್ತಿರುವ ಅನುಜ / ಅಂಜುಶ್ರೀ ಎಂದು ಭಾವಿಸಿ ಶೈಕ್ಷಣಿಕ ಪ್ರವಾಸದಲ್ಲಿ ಭಾಗವಹಿಸಲು ರೂ. 2000 ಗಳನ್ನು ಕಳುಹಿಸುವಂತೆ ಮಂಡ್ಯದ ಕುವೆಂಪು ರಸ್ತೆಯಲ್ಲಿ ವಾಸಿಸುತ್ತಿರುವ ನಿಮ್ಮ ತಂದೆಗೊಂದು ಪತ್ರ ಬರೆಯಿರಿ.

54. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು 15 ವಾಕ್ಯಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ : $1 \times 5 = 5$

— ಗ್ರಂಥಾಲಯ – ಮನುಷ್ಯನ ಜ್ಞಾನದ ಬಾಗಿಲು
— ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಗಳ ಪಾತ್ರ
— ವಾಯುಮಾಲಿನ್ಯದ ಕಾರಣಗಳು